ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |
|---|

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**

**ಪ್ರಾಸಾ- 9 ಚಾಸಾ- 11**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಪೂಜ್ಯ ಎ ವಿ |
| ಗಂಡನ ಹೆಸರುಃ | : | ಡಾಃ ಪ್ರದೀಪ್ |
| ವಯಸ್ಸುಃ | : | 33 ವರ್ಷ |
| ಉದ್ಯೋಗಃ | : | ಪಿಜಿ ವಿದ್ಯಾರ್ಥಿನಿ |
| ವಾಸ | : | ಗದಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 13.02.2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 4-1-20ರಿಂದ 5-2-24ರವರೆಗೆ ನಾನು ಹಿಮ್ಸ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ9-1-20ರಂದು ನಾನು ವೈದ್ಯಾಧಿಕಾರಿಯಾಗಿದ್ದಾಗ ಸಾಯಂಕಾಲ 7-26 ಗಂಟೆ ಸಮಯದಲ್ಲಿ ಸುಮಾರು 16 ವರ್ಷ ವಯಸ್ಸಿನ ಷಣ್ಮುಖ ಬಿನ್ ಚಂದ್ರಶೇಖರ ಎಂಬುವವರನ್ನು ಅವರ ತಂದೆ ಚಂದ್ರಶೇಖರ ರವರು ಸುಟ್ಟಗಾಯಗಳ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಕರೆತಂದಿದ್ದರು. ಸದರಿ ಗಾಯಾಳುವು ಅದೇ ದಿವಸ ಸುಮಾರು 5-45 ಗಂಟೆಗೆ 6 ಅಪರಿಚಿತ ವ್ಯಕ್ತಿಗಳು ತನ್ನ ಮಗಳ ಮೇಲೆ ಟರ್ಪಂಟೈನನ್ನು ಚೆಲ್ಲಿ ನಂತರ ಬೆಂಕಿ ಹಚ್ಚಿದ್ದರಿಂದ ಸುಟ್ಟಗಾಯಗಳಾಗಿರುತ್ತವೆಂದು ತಿಳಿಸಿದರು. ಸದರಿ ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಅವರ ಎಡಕೈನ ಹಸ್ತದ ಮೇಲ್ಭಾಗದಲ್ಲಿ ಮತ್ತು ಎಡಕಾಲಿನ ಮುಂಭಾಗ ಮತ್ತು ಹಿಂಭಾಗದಲ್ಲಿ ಸುಟ್ಟಗಾಯಗಳು ಇದ್ದವು. ಸುಮಾರು 10 ರಿಂದ 20 ಪ್ರತಿಶತ ಸುಟ್ಟಗಾಯಗಳು ಕಂಡುಬಂದವು. ಅದಕ್ಕೆ ಶಸ್ತ್ರಚಿಕಿತ್ಸಕರ ಅಭಿಪ್ರಾಯಕ್ಕಾಗಿ ಗಾಯಾಳುವನ್ನು ಅವರ ವಿಭಾಗಕ್ಕೆ ಕಳುಹಿಸಿದೆನು. ಅಲ್ಲಿ ಗಾಯಾಳುವನ್ನು ಒಳರೋಗಿಯಾಗಿ ದಾಖಲಿಸಿಕೊಂಡು 6 ದಿನ ಚಿಕಿತ್ಸೆ ನೀಡಿದ್ದರು. ಅವರ ಅಭಿಪ್ರಾಯದ ಪ್ರಕಾರ ಸದರಿ ಗಾಯಾಳುವಿಗೆ ಆದಂತಹ ಗಾಯಗಳು ಸಾಮಾನ್ಯ

ಸ್ವರೂಪದ ಗಾಯಗಳಾಗಿರುತ್ತವೆ. ಈ ವಿಚಾರಗಳನ್ನು ನಮೂದಿಸಿ ನಾನು ನಿಪಿ-9ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-9(ಎ) ಎಂದು ಗುರುತಿಸಲಾಯಿತು. ಗಾಯಾಳು ಚಿಕಿತ್ಸೆಗಾಗಿ ಬಂದಾಗ ಸಂಬಂಧಪಟ್ಟ ಠಾಣೆಗೆ ನಿಪಿ-8ರಂತೆ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-8(ಬಿ) ಎಂದು ಗುರುತಿಸಲಾಯಿತು. ಟಿನ್ನರ್ ನಂತಹ ವಸ್ತುವನ್ನು ಎರಚಿ ಅದರ ಮೇಲೆ ಬೆಂಕಿಹಚ್ಚಿದರೆ ಈ ರೀತಿಯ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ**

ಗಾಯಾಳು ನನ್ನ ಬಳಿ ಚಿಕಿತ್ಸೆಗಾಗಿ ಬಂದಾಗ ಗಾಯದ ವಯಸ್ಸು 24 ಗಂಟೆಗಿಂತ ಒಳಗಡೆ ಇತ್ತು. ಅವರು ಬೇರೆ ಕಡೆ ಚಿಕಿತ್ಸೆ ಪಡೆದುಕೊಂಡಿದ್ದರೋ ಅಥವಾ ನನ್ನಲ್ಲಿ ಗೇ ಬಂದಿದ್ದರೋ ಎಂದರೆ ಸಾಕ್ಷಿಯು ಅವರು ನನ್ನ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಆದ್ದರಿಂದ ಗೊತ್ತಿಲ್ಲ ಎನ್ನುತ್ತಾರೆ. ನಾನು ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ಆಗಿರುವುದು ಕಂಡುಬರಲಿಲ್ಲ. ಬೇರೆಲ್ಲಾದರೂ ಚಿಕಿತ್ಸೆ ಪಡೆದುಕೊಂಡು ಬಂದಿದ್ದಾರೋ ಎಂದು ನಾನು ಗಾಯಾಳುವಲ್ಲಿ ಕೇಳಿಲ್ಲ. ತಂದೆಯನ್ನು ಕೇಳಿರುತ್ತೇನೆ, ಅದಕ್ಕೆ ಅವರೇನೂ ಉತ್ತರ ಕೊಡಲಿಲ್ಲ. ನಾನು ಚಿಕಿತ್ಸೆ ಕೊಡುವ ಸಂದರ್ಭದಲ್ಲಿ ಟರ್ಪಂಟೈನ ಕುರುಹು ಏನಾದರೂ ಇತ್ತಾ ಎಂದರೆ ಸಾಕ್ಷಿಯು ಅದರ ವಾಸನೆ ಬರುತ್ತಿತ್ತು ಎನ್ನುತ್ತಾರೆ. ನಿಖರವಾಗಿ ಟರ್ಪಂಟೈನ ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ. ಸುಟ್ಟ ಗಾಯವು ಬೇರೆ ರೀತಿಯಲ್ಲೂ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನಿದ್ದ ಸಂದರ್ಭದಲ್ಲಿ ಪೊಲೀಸರು ಯಾರು ಬರಲಿಲ್ಲ. ನನ್ನ ಸಮಕ್ಷಮ ಪೊಲೀಸರು ಹೇಳಿಕೆ ಮಾಡಿಕೊಂಡಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**